## ಕರ್ನಾಟಕ ರೆಡ್ಡಿಜನ ಸಂಘದ ಆಜೀವ ಸದಸ್ಯರಿಗೆ 'ಸ್ಮಾರ್ಟ್ ಕಾರ್ಡ್' ವಿತರಿಸುವ ಬಗ್ಗೆ

ಕರ್ನಾಟಕ ರೆಡ್ಡಿಜನ ಸಂಘದ ಎಲ್ಲಾ ಆಜೀವ ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ **'ಸ್ಮಾರ್ಟ್ ಕಾರ್ಡ್'** ನಮೂನೆಯ ಅರ್ಜಿಯನ್ನು ಕರ್ನಾಟಕ ರೆಡ್ಡಿಜನ ಸಂಘದ ವೆಬ್‌ಸೈಟ್‌ನಲ್ಲಿ ಅಥವಾ ಕೆ.ಆರ್.ಜೆ.ಎಸ್.ನ ಪ್ರಧಾನ ಕಛೇರಿಯಲ್ಲಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ರೂ. 200ಗಳೊಂದಿಗೆ ಹಾಗೂ ಎರಡು ಭಾವಚಿತ್ರ ಮತ್ತು ಯಾವುದಾದರೂ ಗುರುತಿನ ಚೀಟಿಯೊಂದಿಗೆ ಪ್ರಧಾನ ಕಛೇರಿಯಲ್ಲಿ ಸಲ್ಲಿಸತಕ್ಕದ್ದೆಂದು ಕರ್ನಾಟಕ ರೆಡ್ಡಿಜನ ಸಂಘದ ಬೈಲಾ ನಿಯಮಗಳ ಪ್ರಕಾರ ಈ ರೀತಿ ಸ್ಮಾರ್ಟ ಕಾರ್ಡ್ ಪಡೆದವರು ಮಾತ್ರ ಮತ ಚಲಾಯಿಸಲು / ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರಿರುತ್ತಾರೆಂದೂ, ಸ್ಮಾರ್ಟ್ ಕಾರ್ಡ್ ವಿತರಿಸುವ ಪ್ರಕ್ರಿಯೆಯು ದಿನಾಂಕ 25–3–2019ನಿಂದ 25–5–2019ರವರೆಗೆ ಚಾಲ್ತಿಯಲ್ಲಿರುತ್ತದೆ ಎಂದು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳಲ್ಲಿ ದಿನಾಂಕ 12–3–2019ರಂದು ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಲಾಗಿತ್ತು.

ತದನಂತರ, ಸ್ಮಾರ್ಟ್ ಕಾರ್ಡ್ ವಿತರಣಾ ಪ್ರಕ್ರಿಯೆಯ ಅವಧಿಯನ್ನು ದಿನಾಂಕ 25–5–2019ರಿಂದ 25–6–2019ರವರೆಗೆ ವಿಸ್ತರಿಸಲಾಗಿತ್ತು.

**ದಿನಾಂಕ 18–6–2019ರಂದು ನಡೆದ ಕೆ.ಆರ್.ಜೆ.ಎಸ್.ನ ಸಲಹಾ ಸಮಿತಿ ಮತ್ತು ಆಡಳಿತ ಮಂಡಳಿ ಜಂಟಿ ಸಭೆಯಲ್ಲಿ ನಿರ್ಧಾರವಾದ ಹಿನ್ನೆಲೆಯಲ್ಲಿ ಸ್ಮಾರ್ಟ್ ಕಾರ್ಡ್ ವಿತರಣಾ ಪ್ರಕ್ರಿಯೆಯ ಅವಧಿಯನ್ನು ದಿನಾಂಕ 25–6–2019ರಿಂದ 30–6–2019ರವರೆಗೆ ವಿಸ್ತರಿಸಲಾಗಿದೆ.**

ಈ ಅವಧಿಯಲ್ಲಿ ತಪ್ಪದೇ ಸ್ಮಾರ್ಟ್ ಕಾರ್ಡ್ ಪಡೆಯುವಂತೆಯೂ ಮುಂದೆ ಯಾವುದೇ ಕಾರಣಕ್ಕೂ ಈ ಅವಧಿಯನ್ನು ವಿಸ್ತರಿಸಲಾಗುವುದಿಲ್ಲವೆಂದು ಕರ್ನಾಟಕ ರೆಡ್ಡಿಜನ ಸಂಘದ ಎಲ್ಲಾ ಅಜೀವ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : www.reddyjanasangha.org ದೂರವಾಣಿ ಸಂಖ್ಯೆ : 080–25534194.

**(ಮುನಿನಾಗಪ್ಪ)**
ಪ್ರಧಾನ ಕಾರ್ಯದರ್ಶಿ